

# ರಂಬ್ಟಾನ್ ಎಂಬ 'ಸಿಹಿ ಮುತ್ತು'



ಜನವರಿಯಲ್ಲಿ ಹೂ ಬಿಡಲಾರಂಭಿಸಿದರೆ ಜೂನ್ ತಿಂಗಳ ವೇಳೆಗೆ ಗೊಂಚಲು ತುಂಬ ಕಾಯಿ ಹಣ್ಣುಗಳಾಗುತ್ತವೆ. ಸೆಪ್ಟೆಂಬರ್‌ವರೆಗೆ ವಾರಕ್ಕೊಮ್ಮೆ ಕೊಯ್ಯಬಹುದು.

■ ಪ. ರಾಮಕೃಷ್ಣ ಶಾಸ್ತ್ರಿ

ಪುತ್ತೂರಿಗೆ ಸಮೀಪದ ಸೇಡಿಯಾಪು ಜನಾರ್ದನ ಭಟ್ಟರ ವೈವಿಧ್ಯಮಯ ಕೃಷಿ ಲೋಕವನ್ನು ನೋಡಲೆಂದು ಹೋಗಿದ್ದೆ. ಅವರ ತೋಟದಲ್ಲಿ ಹತ್ತಾರು ಕಂಡರಿಯದ ಹಣ್ಣಿನ ಮರಗಳ ಜತೆಗೆ ನೀಳವಾಗಿ ಬೆಳೆದ ಮರಗಳು ಗಮನ ಸೆಳೆದವು. ಯಾವುದೋ ಕಾಡು ಮರದಂತಿದ್ದ ಅದರ ಕೊಂಬೆಗಳಲ್ಲಿ ಗೊಂಚಲು ಗೊಂಚಲಾಗಿ ಕೆಂಪು ಕೆಂಪು ಹಣ್ಣುಗಳು, ಅದರೊಂದಿಗೆ ಹಸಿರು ಕಾಯಿಗಳಿದ್ದವು. ಹಣ್ಣನ್ನು ಕೊಯಿದು ನೋಡಿದರೆ ಮೈ ಮೇಲೆ ಉದ್ದನೆಯ ಕಾಲುಗಳಿರುವ ಆಕ್ಟೋಪಸ್‌ನಂತಿದೆ. ಒಡೆದರೆ ಮುತ್ತಿನ ಚಿಪ್ಪಿನ ಹಾಗಿರುವ ಸಿಪ್ಪೆಯ ಕವಾಟಗಳು ತೆಗೆದುಕೊಳ್ಳುತ್ತವೆ. ಒಳಗಿದೆ, ಅಚ್ಚ ಬಿಳಿಯ ಮುತ್ತಿನಂತಹ ಹಣ್ಣಿನ ತಿರುಳು. ಬಾಯಿಗೆಸೆದುಕೊಂಡೆ. ಹುಳಿಮಿಶ್ರಿತ ಜೇನಿನಂತಹ ಸಿಹಿ.

ನಮ್ಮ ರೈತರಿಗೆ, ಗ್ರಾಹಕರಿಗೆ ಅಪರಿಚಿತವೇ ಎನ್ನಬಹುದಾದ ಈ ಹಣ್ಣಿನ ಹೆಸರು ರಂಬ್ಟಾನ್. ಇದು ಮಲೇಷ್ಯಾ ಮೂಲದ್ದು ಎನ್ನುತ್ತಾರೆ ಜನಾರ್ದನ ಭಟ್ಟರು. ಕರಾವಳಿಯ ಹವೆ, ಮಣ್ಣು, ಮಳೆ ಎಲ್ಲದಕ್ಕೂ ಹೊಂದಿಕೊಂಡು ತಾನು ಬೆಳೆಯಬಲ್ಲೆ ಎಂದು ಸಾಬೀತು ಪಡಿಸಿರುವ ಅದನ್ನೇ ಒಂದು ವ್ಯಾಪಕ ಕೃಷಿಯಾಗಿ ಬೆಳೆಸುವ ಧೈರ್ಯಕ್ಕೆ ಯಾರೂ ಮುಂದಾಗಿಲ್ಲ. ಅಂತಹ ಸಾಹಸ ಮಾಡಿರುವ ಏಕೈಕ ರೈತರೆಂದರೆ ಜನಾರ್ದನ

(8ನೇ ಪುಟ ನೋಡಿ)